# ಬಾಲಕೃಷ್ಣನ ಲೀಲೆಗಳು–ದಾಸರು ಕಂಡಂತೆ

ನಾಗೇಶ ರಾವ್ ಎಲ್.ಜಿ.

ದಾಸಸಾಹಿತ್ಯದಲ್ಲಿ ಶ್ರೀಕೃಷ್ಣನ ಬಾಲಲೀಲೆಗಳ ವರ್ಣನೆ ಮನಮೋಹಕವಾಗಿದೆ. ಭಕ್ತಿ, ಭಾವಗಳ ಮೂಲಕ ಮೂಡಿ ಬಂದಿರುವ ಕೀರ್ತನೆಗಳ ವಿಷಯವಾಗಿ ಇಲ್ಲಿ ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಬೆಂಗಳೂರು ಆಶ್ರಮದ ಭಕ್ತರು; ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.

ಪುರಂದರ, ಕನಕ ಮೊದಲಾದ ದಾಸವರೇಣ್ಯರ ಕೀರ್ತನೆಗಳು ಕರ್ನಾಟಕದಲ್ಲಿ ಮನೆಮನೆಗಳಲ್ಲೂ ಕೇಳಿ ಬರುತ್ತವೆ. ಸಂಗೀತವನ್ನು ಕಲಿಯದಿದ್ದರೂ ಹೆಣ್ಣುಮಕ್ಕಳು ಅವುಗಳನ್ನು ರಾಗವಾಗಿ ಹಾಡುತ್ತಾರೆ. ಅರಶಿನ ಕುಂಕುಮಕ್ಕೆ ಕರೆದಾಗ ನೆರೆಹೊರೆಯ ಹೆಣ್ಣುಮಕ್ಕಳ ಎದುರು ಈ ಹಾಡುಗಳನ್ನು ಹೇಳುವುದು ರೂಢಿ. ಇದಲ್ಲದೆ ಸಂಗೀತಗಾರರು ಈ ಕೀರ್ತನೆಗಳನ್ನು ರಾಗ-ತಾಳ ಸಮೇತ ಹಾಡುತ್ತಾರೆ.

ಪುರಂದರದಾಸರ ರಚನೆಗಳಲ್ಲಿ ಬಾಲಕೃಷ್ಣನ ಲೀಲೆಗಳನ್ನು ಕುರಿತ ಪದಗಳು ಅನೇಕ ಇವೆ. ಬಹುಮಟ್ಟಿಗೆ ಕೃಷ್ಣನ ಬಾಲಲೀಲೆಗಳೇ ಅವರ ಗಮನವನ್ನು ಸೆಳೆದಿರುವುದು. ಕೃಷ್ಣನ ಸಾಕುತಾಯಿಯಾದ ಯಶೋದೆಯು ತನ್ನ ಪ್ರಾಣಪ್ರಿಯನಾದ ಕೃಷ್ಣನನ್ನು ಮುದ್ದು ಮಾಡುವ ಬಗೆ, ಕೃಷ್ಣನು ಸಣ್ಣವನಿದ್ದಾಗ ಮಾಡಿದ ಸಾಹಸ ಕೃತ್ಯಗಳು, ಶಿಶು ಸಹಜವಾದ ಆಟಪಾಟಗಳು, ಮುಗ್ಧಭಾವದಿಂದ ಗೋಪಿಯರನ್ನು ಅವನು ಕಾಡಿದ ರೀತಿ, ಅವರು ಯಶೋದೆಯ ಬಳಿ ಬಂದು ದೂರು ನೀಡುವುದು, ಯಶೋದೆ ಮನಸ್ಸಿಲ್ಲದ ಮನಸ್ಸಿನಿಂದ ಕೃಷ್ಣನನ್ನು ಗದರಿಸುವುದು, ಲಾಲಿ ಹಾಡುಗಳು — ಇವೆಲ್ಲ ದಾಸರ ಪದಗಳಲ್ಲಿ ಸ್ವಾರಸ್ಯವಾಗಿ ಮೂಡಿಬಂದಿವೆ. ಪುರಂದರದಾಸರ ಭಾವುಕತೆ, ಕವಿತಾ ಸಾಮರ್ಥ್ಯ, ಉಕ್ತಿಯ ವೈಚಿತ್ರ್ಯಗಳನ್ನು ಇಲ್ಲಿ ನೋಡಬಹುದು. ಅವರು ಜಾನಪದ ಶೈಲಿಯನ್ನು ಹಿಡಿದು ಆಡುಮಾತುಗಳನ್ನೇ ಬಳಸಿ ಕಾವ್ಯರಚನೆ ಮಾಡಿರುತ್ತಾರೆ. ಮಕ್ಕಳ ಮುದ್ದು ಮಾತುಗಳನ್ನೇ ಅನುಸರಿಸಿ - ಬೂಚಿ ಬಂದಿದೆ, ಪಾಚಿಕೊಳ್ಳೊ, ಗುಮ್ಮನ ಕರೆಯದಿರೆ, ಪೋಪು ಹೋಗೋಣ ಬಾ, ಅಮ್ಮಿಯ ಬೇಡೆನು, ಮಮ್ಮು ತಿನ್ನುವೆನು — ಮೊದಲಾದ ಪ್ರಯೋಗಗಳನ್ನು ಮಾಡಿರುತ್ತಾರೆ. ತಾಯಿಗೆ ಮಗುವಿನ ಬಗ್ಗೆ ಇರುವ ಅತಿಶಯವಾದ ಒದಗುವ ಆತಂಕವನ್ನು 'ಪೋಗದಿರೆಲೋ ರಂಗ' ; 'ಮನೆಯೊಳಗಾಡೋ' ಮೊದಲಾದ ಪದಗಳಲ್ಲಿ ನೋಡಬಹುದು. 'ಆಡಿಸಿದಳೆ ಯಶೋದೆ, ಜಗದೋದ್ಧಾರನ' ಎಂಬ ಪದದಲ್ಲಿ ಸೂಸುವ ವಾತ್ಸಲ್ಯ ಎಣೆಯಿಲ್ಲದ್ದು.

ಪುರಂದರದಾಸರ, ವ್ಯಾಸರಾಯರ ಪದಗಳು ಭಾವಗೀತೆಯ ರೂಪದಲ್ಲಿದ್ದು ಗೇಯಪ್ರಧಾನವಾಗಿವೆ. ಅವರ ರಚನೆಗಳಲ್ಲಿ ಪ್ರಾಸವು ಲೀಲಾಜಾಲವಾಗಿ ಬಂದೊದಗುತ್ತದೆ. ಅದಕ್ಕಾಗಿ ಅವರು



ಶ್ರಮಿಸಿಲ್ಲವೆಂಬುದು ಥಟ್ಟನೆ ತಿಳಿಯುತ್ತದೆ. ಭಾಷೆಯ ಮೇಲಿರುವ ಪ್ರಭುತ್ವ ಎದ್ದು ಕಾಣುತ್ತದೆ. (ಉದಾಃ 'ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ').

ಭಕ್ತಿಯ ಭಾವುಕತೆ, ಆರ್ತನ ಅಳಲು, ಅಪರೋಕ್ಷ ಜ್ಞಾನದ ಅನುಭಾವ, ನೀತಿಯ ಉನ್ನತಿ, ಶೀಲದ ಆಗ್ರಹ - ಇವು ಅವರ ಪದಗಳಲ್ಲಿ ಎದ್ದು ಕಾಣುತ್ತವೆ. ಅಂತೆಯೇ ಶೃಂಗಾರದ ಸೊಗಸು, ಅನ್ಯೋಕ್ತಿಯ ಸ್ವಾರಸ್ಯ, ಹಾಸ್ಯ, ಕುಚೋದ್ಯಗಳು ಇವೆ. ಮಾತಿನಲ್ಲಾಗಲೀ, ಶೈಲಿಯಲ್ಲಾಗಲೀ ಕೃತಕತೆಯಿಲ್ಲ. ಅದು ಸ್ವಭಾವೋಕ್ತಿ.

ಯಶೋದೆ ಕೃಷ್ಣನನ್ನು ವಾತ್ಸಲ್ಯಭಾವದಿಂದ ಆಡಿಸುತ್ತಾಳೆ. ಅವನನ್ನು ಮಗನೆಂದೇ ತಿಳಿದು ಲಾಲಿಸಿ ಪಾಲಿಸುತ್ತಾಳೆ. ಹೀಗೆ 'ಜಗದೋದ್ಧಾರನ ಆಡಿಸಿದಳು ಯಶೋದೆ.'

ಮಗು ಏಕೆ ಅಳುತ್ತಿದೆಯೆಂದು ಯಶೋದೆಗೆ ತಿಳಿಯುತ್ತಿಲ್ಲ. ಅವನನ್ನು ವಿಧವಿಧವಾಗಿ ಸಂತೈಸುತ್ತಾಳೆ. 'ಅಳುವುದ್ಯಾತಕೋ ರಂಗ, ಅತ್ತ ರಂಜಿಸುವ ಗುಮ್ಮ'' ಎಂದು ಹೇಳುತ್ತಾಳೆ. ಶಿಶುಸಹಜವಾದ ಮುಗ್ಧತೆಯಿಂದ ಬಾಲಕೃಷ್ಣನು 'ಗುಮ್ಮನನ್ನು ಕರೆಯಬೇಡ' ಎಂದು ಹೇಳುತ್ತಾನೆ. ಈ ಪದದಲ್ಲಿ ದಾಸರು ಮಕ್ಕಳಾಡುವ ಮುದ್ದುಮಾತುಗಳನ್ನೇ ಬಳಸಿದ್ದಾರೆ. ಅಮ್ಮಿ, ಮಮ್ಮು, ಗುಮ್ಮ ಇತ್ಯಾದಿ.

ಬಾಲಕೃಷ್ಣನ ರೂಪಲಾವಣ್ಯಗಳನ್ನು ವಿಧವಿಧವಾಗಿ ಬಣ್ಣಿಸಲಾಗಿದೆ. ಇಲ್ಲಿ ಕೃಷ್ಣನ ರೂಪ ಕಣ್ಣಮುಂದೆ ಬಂದು ನಿಲ್ಲುತ್ತದೆ. 'ಯಾರೇ ರಂಗನ ಯಾರೇ ಕೃಷ್ಣನ ಕರೆಯಬಂದವರು' – ಬಾಲಕೃಷ್ಣನ ಸುಂದರ ರೂಪವನ್ನು ಬಣ್ಣಿಸಿ ಅವನು ತಮ್ಮ ಕಣ್ಣಮುಂದೆ ಬಂದು ನಿಲ್ಲಬೇಕೆಂದು ದಾಸರು ಕರೆಯುತ್ತಾರೆ. ಇಲ್ಲಿ ಕೃಷ್ಣನ ವರ್ಣನೆ ಸುಂದರವಾಗಿದೆ. ಇನ್ನೊಂದೆಡೆ,

**ಯಾದವ ನೀ ಬಾ ಯದುಕುಲನಂದನ**
**ಮಾಧವ ಮಧುಸೂದನ ಬಾರೋ ॥**

–ಎಂದು ಶ್ರೀಕೃಷ್ಣನನ್ನು ದಾಸರು ಕರೆಯುತ್ತಾರೆ.

ಬಾಲಕೃಷ್ಣನನ್ನು ತೂಗಿ ಮಲಗಿಸುವ ಜೋಗುಳದ ಪದವನ್ನೂ ದಾಸರು ಹಾಡಿದ್ದಾರೆ, ಅದೇ, 'ಲಾಲಿಸಿದಳು ಮಗನ ಯಶೋದ, ಲಾಲಿಸಿದಳು ಮಗನ.'

ವ್ಯಾಸರಾಜರ 'ಕೃಷ್ಣಾ ನೀ ಬೇಗನೇ ಬಾರೋ' ಎಂಬ ಪದ ತುಂಬಾ ಪ್ರಖ್ಯಾತವಾದದ್ದು. ಈ ಹಾಡನ್ನು ನೃತ್ಯರೂಪಕ್ಕೂ ಅಳವಡಿಸಿಕೊಳ್ಳಲಾಗಿದೆ. ಕೃಷ್ಣನ ಕೊಳಲಿನ ನಾದ ಮಾಧುರ್ಯವನ್ನೂ ಅದರ ಪರಿಣಾಮವನ್ನೂ ವ್ಯಾಸರಾಯರು ಬಣ್ಣಿಸಿದ್ದಾರೆ. ವ್ಯಾಸರಾಯರ ಕಲ್ಪನೆ ಅದ್ಭುತವಾದದ್ದು. 'ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ, ತಳಿರಂದದಿ ತಾ ಪೊಳೆವ ಕರ ವಿಡಿದು' – ಕೊಳಲಿನ ಮಧುರಗಾನವನ್ನು ಕೇಳಿ ಹಸುಗಳು ಹುಲ್ಲು ಮೇಯುವುದನ್ನು ಮರೆತವು. ಕರುಗಳು ಹಾಲು ಕುಡಿಯುವುದನ್ನು ಮರೆತವು. ಸಾವಧಾನದಿ ಹರಿದಳು ಯಮುನೆ!

ಬಾಲಕೃಷ್ಣನು ತುಂಟಾಟಕ್ಕಾಗಿ ಕಡಗೋಲನ್ನು ತೆಗೆದು ಬಚ್ಚಿಟ್ಟಿರುತ್ತಾನೆ. ಯಶೋದೆ ಕಡೆಗೋಲು ಕೊಡು ಎಂದು ಮುದ್ದಿನಿಂದ ಕೇಳುತ್ತಿದ್ದಾಳೆ. ವ್ಯಾಸರಾಯರ ಸುಂದರ ಕಲ್ಪನೆ ನೋಡಿ:

**ಕಡೆಗೋಲ ತಾರೆನ್ನ ಚಿನ್ನವೆ, ಮೊಸ**
**ರೊಡೆದರೆ ಬೆಣ್ಣೆ ಬಾರದು, ಮುದ್ದುರಂಗ ॥ಪ॥**

**ಅಣ್ಣನ ಒಡಗೊಂಡು ಬಾರಯ್ಯ ಸವಿ**
**ಬೆಣ್ಣೆಯ ಮುದ್ದೆಯ ಮೆಲುವೆಯಂತೆ**
**ಬಣ್ಣದ ಸರವನು ಕೊರಳಲಿ ಹಾಕುವೆ**
**ಚಿಣ್ಣರೊಡನೆ ಕೂಡಿ ಆಡಕಳುಹುವೆ ರಂಗ ॥೧॥**

ಬಾಲಕೃಷ್ಣನು ಬೆಣ್ಣೆಯನ್ನು ಕದ್ದರೂ, ತುಂಟಾಟವಾಡಿದರೂ ಗೋಪಿಯರ ಕಣ್ಮಣಿ. ಎಂಥಾ ಮಗನನ್ನು ಪಡೆದೆಯೇ ಗೋಪಿ ಎಂದು ಯಶೋದೆಯ ಭಾಗ್ಯವನ್ನು ಹಾಡಿ ಹೊಗಳುತ್ತಿದ್ದಾರೆ. 'ಎಂಥಾ ಪುಣ್ಯವೆ ಗೋಪಿ, ಎಂಥಾ ಭಾಗ್ಯವೆ ನಿನ್ನದು, ಇಂಥಾ ಮಗನ ಕಾಣೆವೇ' ಎಂದು ಹೇಳುತ್ತಿದ್ದಾರೆ, ಯಶೋದೆ ಆ ಪುರಂದರ ವಿಠಲನಿಗೆ ಅಲಂಕಾರ ಮಾಡುವಳು, ಆರತಿ ಮಾಡುವಳು, ದೃಷ್ಟಿ ತೆಗೆಯುವಳು, ಮೊಲೆಯೂಡಿಸುವಳು, ನೋಡಿ ನಲಿಯುವಳು, ಎಂಥಾ ಭಾಗ್ಯ! 'ನಿನ್ನ ಮಗನ ಕರೆಯೆ ಎಮ್ಮ ಪ್ರಾಣದೊರೆಯ ಘನ್ನ ಪರಬ್ರಹ್ಮನ ಚನ್ನ ವಿಠಲರಾಯನ' ಎಂದು ಗೋಪಿಯರು ಬೇಡುತ್ತಾರೆ.

ಬಾಲಕೃಷ್ಣ ತನ್ನ ಕಣ್ಣಮುಂದೆಯೇ ಆಡುತ್ತಿರಬೇಕು, ತನ್ನ ಕಣ್ಣಿಂದ ಮರೆಯಾಗಬಾರದು ಎಂದು ಯಶೋದೆ ಬಯಸುತ್ತಾಳೆ. 'ಎಲ್ಲಾಡಿ ಬಂದೆ ಎನ್ನ ಕೃಷ್ಣಯ್ಯ?' ಎಂದು ಕೇಳುತ್ತಾಳೆ. 'ಮನೆಯೊಳಗಾಡೊ ಗೋವಿಂದ, ನೆರೆ ಮನೆಯೊಳಗ್ಯಾಕೆ ಹೋಗುವೆ ಮುಕುಂದ' ಬೇರೆಲ್ಲೂ ಆಡಲು ಹೋಗಬೇಡ. ಜಾರ–ಚೋರನೆನಿಸಬೇಡ ಎಂದು ಎಚ್ಚರಿಕೆ ನೀಡುತ್ತಾಳೆ.


ಬಾಲಕೃಷ್ಣನನ್ನು ಲಾಲಿ ಹಾಡಿತೂಗಿ ಮಲಗಿಸುತ್ತಿರುವಳು ಗುಮ್ಮನು ಬರುವನೆಂದು ಹೆದರಿಸುವಳು. ಬಾಲಕೃಷ್ಣನು ಶಿಶು ಸಹಜ ಮುಗ್ಧತೆಯಿಂದ 'ಅಮ್ಮಾ ಗುಮ್ಮನ ಕರೆಯದಿರೆ' ಎಂದು ಹೇಳುತ್ತಾನೆ.

ಬಾಲಕೃಷ್ಣನ ಲೀಲೆಗಳು ದಾಸಸಾಹಿತ್ಯದ ಒಂದು ವಿಶಿಷ್ಟತೆಯಾಗಿದೆ. ಇವು ಹೃದಯಂಗಮವಾಗಿದ್ದು ಅತ್ಯಂತ ಜನಪ್ರಿಯವಾಗಿವೆ. ✽

*ಆಕರ ಗ್ರಂಥಗಳು*

*೧. **ಪುರಂದರ ಸಾಹಿತ್ಯ ದರ್ಶನ** – ಕನ್ನಡ ಮತ್ತು ಸಂಸ್ಕೃತಿ ಇಲಾಖೆ*
*೨. **ಪುರಂದರ ಭಾಗವತ** – ಡಾ. ವಾಸುದೇವ ಅಗ್ನಿಹೋತ್ರಿ*

**ಯುವಚೇತನ**



## ಸಾಧನೆ

ಆಧ್ಯಾತ್ಮಿಕ ಜೀವನಕ್ಕೆ ಮುಖ್ಯ ಸಹಾಯವೆ ಧ್ಯಾನ. ಧ್ಯಾನದಲ್ಲಿ ನಮ್ಮ ಭೌತಿಕ ಉಪಾಧಿಗಳನ್ನೆಲ್ಲಾ ಮರೆತು ನಾವು ಪವಿತ್ರಾತ್ಮರೆಂದು ಭಾವಿಸುವೆವು. ಧ್ಯಾನ ಮಾಡುವಾಗ ನಾವು ಯಾವ ಬಾಹ್ಯ ಸಹಾಯದ ಮೇಲೂ ನಿಲ್ಲುವುದಿಲ್ಲ. ಆತ್ಮ ಸ್ಪರ್ಶವಾದರೆ ಎಂತಹ ಹೀನ ವಿಷಯಕ್ಕೂ ಅದು ಒಳ್ಳೆಯ ಮೆರುಗು ನೀಡುವುದು. ದುರಾತ್ಮನು ಪುಣ್ಯಾತ್ಮನಾಗುವನು. ಎಲ್ಲ ದ್ವೇಷ, ಸ್ವಾರ್ಥಗಳೂ ಮಾಯವಾಗುವುವು. ನಾವು ಈ ದೇಹವನ್ನು ಕುರಿತು ಎಷ್ಟು ಕಡಿಮೆ ಚಿಂತಿಸುತ್ತೇವೋ ಅಷ್ಟು ಮೇಲು. ದೇಹ ಎಂಬ ಭಾವನೆಯೇ ಎಲ್ಲ ದುಃಖಕ್ಕೂ ಮೂಲ. ಇದೇ ರಹಸ್ಯ. ನಾನು ಆತ್ಮ, ದೇಹವಲ್ಲ ಎಂದು ಭಾವಿಸಬೇಕು. ಒಳ್ಳೆಯದು, ಕೆಟ್ಟದ್ದು ಮುಂತಾದ ಹಲವು ಸಂಬಂಧಗಳಿಂದ ಕೂಡಿದ ವಿಶ್ವವೆಲ್ಲ ಒಂದು ದೊಡ್ಡ ಪಟದ ಮೇಲೆ ಬರೆದ ಚಿತ್ರದಂತೆ ಇದೆ. ಅದರ ಸಾಕ್ಷಿಯೇ ನಾನು ಎಂದು ಯೋಚಿಸಬೇಕು.

*— ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು.೧೮೪*